(5)

154ನೇ 6.-ಎ272 = 83
4/KR
1107

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ರವರ ನಿಯಮ 72ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:83ಕ್ಕೆ ಉತ್ತರಿಸುವ ಬಗ್ಗೆ.**

**ವಿಷಯ:-**

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಗ್ರಾಮಸ್ಥರಿಗೆ ಮೂಲಭೂತ ಸೌಕರ್ಯಗಳಿಲ್ಲದೆ ತೊಂದರೆ ಉಂಟಾಗಿರುವ ಕುರಿತು.

****

**ಉತ್ತರ:-**

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕು ಭೀಮಗಡ ಅಭಯಾರಣ್ಯದ ವ್ಯಾಪ್ತಿಯ ಗ್ರಾಮಸ್ಥರಿಗೆ ಮೂಲಭೂತಸೌಕರ್ಯಗಳಿಲ್ಲದೆ ತೊಂದರೆ ಉಂಟಾಗಿರುವ ಬಗ್ಗೆ ಯಾವುದೇ ಮನವಿಗಳು ಸ್ವೀಕೃತವಾಗಿರುವುದಿಲ್ಲ.

ಭೀಮಗಡ ವನ್ಯಜೀವಿಧಾಮದ ಅರಣ್ಯೇತರ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಿಂದ ಯಾವುದೇ ನಿರ್ಬಂಧಗಳಿರುವುದಿಲ್ಲ. ಅಲ್ಲದೇ, ಭೀಮಗಡ ವನ್ಯಜೀವಿಧಾಮದಲ್ಲಿ ಈಗಾಗಲೇ ಇರುವ ರಸ್ತೆಗಳನ್ನು ಮೂಲ ಸ್ವರೂಪದಲ್ಲಿ ಬದಲಾಗದಂತೆ ದುರಸ್ತಿಗೊಳಿಸಲು ಇಲಾಖೆಯ ನಿರ್ಬಂಧಗಳಿರುವುದಿಲ್ಲ.

ಅದರೆ, ಭೀಮಗಡ ವನ್ಯಜೀವಿಧಾಮದಲ್ಲಿನ ಅರಣ್ಯೇತರ ಪ್ರದೇಶಗಳಲ್ಲಿ ಹೊರತುಪಡಿಸಿ, ಉಳಿದ ಅರಣ್ಯ ಪ್ರದೇಶಗಳಲ್ಲಿ ಹೊಸದಾಗಿ ಮೂಲಭೂತ ಸೌಕರ್ಯಗಳಾದ ವಿದ್ಯುತ್ ಸಂಪರ್ಕ, ರಸ್ತೆ ನಿರ್ಮಾಣ ಕುಡಿಯುವ ನೀರು ಮತ್ತು ಇತರೆ ಸೌಲಭ್ಯ ಕಲ್ಪಿಸಲು ಸಂಬಂಧಪಟ್ಟ ಉಪಯೋಗಿ ಸಂಸ್ಥೆಯವರು ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರನ್ವಯ ಅನುಮತಿ ಪಡೆಯಲು ಕೇಂದ್ರ ಸರ್ಕಾರದ https://parivesh.nic.in ವೆಬ್ ಪೋರ್ಟಲ್ ಮೂಲಕ ಪ್ರಸ್ತಾವನೆ ಸಲ್ಲಿಸಿ, ರಾಜ್ಯ ವನ್ಯಜೀವಿ ಮಂಡಳಿ/ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ.

**ಕಡತ ಸಂಖ್ಯೆ: ಎಫ್‌ಇಇ 50 ಎಫ್‌ಎಲ್‌ಎಲ್ 2025**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು